ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ,
ಕುಂದಾಪುರ

<u>ಸಿ.ಸಿ.ನಂ. 1783/2013</u>

ಸಿಪಿಐ, ಕುಂದಾಪುರ ವೃತ್ತ ..... ಪಿರ್ಯಾದುದಾರರು

: ವಿರುದ್ಧ :

1. ಪ್ರಹ್ಲಾದ್ ಪೂಜಾರಿ ..... ಆರೋಪಿ

<u>ದೋಷಾರೋಪಣೆ</u>

ಶ್ರೀಮತಿ ವಿಜೇತಾ ಪಿಂಕಿ ಡೇಸಾ, ಬಿ.ಎ. ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿಗಳಾದ

1. ಪ್ರಹ್ಲಾದ ಪೂಜಾರಿ , 19 ವರ್ಷ<br>ತಂದೆ ಶೀನ ಪೂಜಾರಿ<br>ಗೋಳಿಬೆಟ್ಟು , ಐರೋಡಿ ಗ್ರಾಮ<br>ಸಾಸ್ತಾನ , ಉಡುಪಿ ತಾಲೂಕು

2. ಪ್ರಶಾಂತ ಶೇರಿಗಾರ , 21 ವರ್ಷ<br>ತಂದೆ ರಾಮಚಂದ್ರ ಶೇರಿಗಾರ<br>ಬಾಳುಮನೆ , ಚೆನ್ನಿಮಕ್ಕಿ<br>ಗುಂಡ್ಮಿ ಸಾಸ್ತಾನ , ಉಡುಪಿ ತಾಲೂಕು

3. ಅಭಿಷ್ಷೇಕ್ ಶೆಟ್ಟಿಗಾರ , 19 ವರ್ಷ<br>ತಂದೆ ಶ್ರೀನಿವಾಸ ಶೆಟ್ಟಿಗಾರ<br>ಅಭಿಷ್ಷೇಕ್ ನಿಲಯ<br>ಸಾಸ್ತಾನ<br>ಗುಂಡ್ಮಿ ಗ್ರಾಮ<br>ಉಡುಪಿ ತಾಲೂಕು

4. ಶ್ರೀಮತಿ ಪ್ರೇಮ ,<br>ಗಂಡ ರಾಮಚಂದ್ರ ಶೇರಿಗಾರ<br>ಬಾಳುಮನೆ , ಚೆಳ್ಳಿಮಕ್ಕಿ<br>ಗುಂಡ್ಮಿ ಗ್ರಾಮ<br>ಸಾಸ್ತಾನ , ಉಡುಪಿ ತಾಲೂಕು

ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ

ದಿಃ 27.11.2013 ರಂದು ರಾತ್ರಿ 0.15 ಗಂಟೆ ಸಮಯದಲ್ಲಿ ಸಾಕ್ಷಿ1ನೇಯವರು ಸಾಕ್ಷಿ2ನೇಯವರೊಂದಿಗೆ ಕೊಟೇಶ್ವರ ಜಾತ್ರೆಗೆ ಬಂದು ಕೊಟೇಶ್ವರದ ಕಾಗೇರಿ ಎಂಬಲ್ಲಿ ಅಶ್ವಥಮರದ ಕಟ್ಟೆ ಪೂಜೆ ಮುಗಿಸಿ ಒಳಗಿನ ಕಾಲುದಾರಿಯಲ್ಲಿ ನಡೆದುಕೊಂಡು ಹೋಗುವಾಗ , 1 ರಿಂದ 3ನೇ ಆರೋಪಿತರಾದ ನೀವು ಸುಲಿಗೆ ಮಾಡುವ ಸಮಾನ ಉದ್ದೇಶದಿಂದ  ಅವರನ್ನು ಹಿಂಬಾಲಿಸಿಕೊಂಡು ಹೋಗಿ , 1ನೇ ಆರೋಪಿಯಾದ ನೀವು ಸಾಕ್ಷಿ1ನೇಯವರ ಕುತ್ತಿಗೆಯಲ್ಲಿದ್ದ ಚಿನ್ನದ ಎರಡು ಎಳೆಯ ಚಿನ್ನದ ದಳಪತಿ ಕರಿಮಣಿ ಸರ ಮತ್ತು ಹವಳದ ಚಿನ್ನದ ಸರವನ್ನು ಸುಲಿಗೆ ಮಾಡಿಕೊಂಡು ಹೋಗಿರುತ್ತೀರೆಂದು,  ಆ ಕಾರಣ ನಿಮ್ಮ ಈ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 392 ರ ಕೆಳಗೆ ಶಿಕ್ಷಾರ್ಹವಾಗಿದ್ದು, ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

{2} ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ, 1ನೇ ಆರೋಪಿಯಾದ ನೀವು 2 ಮತ್ತು 3ನೇ ಆರೋಪಿಸರಾದ ನಿಮ್ಮೊದಿಗೆ ಸೇರಿಕೊಂಡು ಸುಲಿಗೆ ಮಾಡಿದ ಚಿನ್ನದ ಆಭರಣಗಳನ್ನು ಅಡವಿರಿಸಿ ಹಣವನ್ನು ಹಂಚಿಕೊಂಡಿರುತ್ತೀರೆಂದೂ, 4ನೇ ಆರೋಪಿತರಾದ ನೀವು ಸುಲಿಗೆ ಮಾಡಿರುವ ಚಿನ್ನದ ಕರಿಮಣಿ ಸರವನ್ನು ಸಾಸ್ತಾನ ಕೋ ಆಪರೇಟಿವ್ ಸೊಸೈಟಿಯಲ್ಲಿ ನಿಮ್ಮ ಹೆಸರಿನಲ್ಲಿ ಅಡವಿರಿಸಿ 2ನೇ ಆರೋಪಿಯಾದ ನಿಮಗೆ ಸಹಕರಿಸಿರುತ್ತೀರೆಂದೂ, ಆ ಕಾರಣ ನಿಮ್ಮ ಈ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 414 ರ ಕೆಳಗೆ ಶಿಕ್ಷಾರ್ಹವಾಗಿದ್ದು, ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲ್ಕಂಡ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷಯಲ್ಲಿ ಓದಿ ಹೇಳಿದ್ದು ಕೇಳಿ ಸರಿಯೆಂದು ದಿನಾಂಕ 11.07.2014ರಂದು ಸಹಿ ಮಾಡಿರುತ್ತಾರೆ.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ